"ನೀನೊಬ್ಬಳು ತೃಪ್ತಿಯೇ ಕಾಣದ ಹೆಂಗಸು ಮೇಬಲ್! ಈ ವರೆಗೆ ನಮ್ಮ ಪುಟ್ಟಿ ಹಾಲು ಕುಡಿಯೋಲ್ಲ, ತೆಳ್ಳಗೆ ಕಡ್ಡಿಯಂಗಿದ್ದಾಳೆ ಅಂತ ಅಳುತ್ತಿದ್ದೆ. ಈಗ ಉಲ್ಟಾ ಹೊಡೀತಿದ್ದೀಯ. ನಿಮ್ಮ ಜಾತೀನೇ ಅಷ್ಟು..." ಅವನು ಸಿಡಿಮಿಡಿಗೊಳ್ಳುತ್ತಾ ಹೇಳಿದ.

"ಮಗುವಿನ ಅದೃಷ್ಟವೆನ್ನಬೇಕು, ನನಗಿದು ಹೊಳೆಯಿತು. ಮುಂದಿನ ಫೀಡಿಂಗ್‌ನಿಂದ ಇದು ಸಲ್ಲದು, ಸಲ್ಲದು, ಸಲ್ಲದು!" ಎನ್ನುತ್ತಾ ಮೇಬಲ್ ದಡಬಡನೆ ಮಗುವನ್ನು ಎತ್ತಿಕೊಂಡು ಭುಸುಗುಡುತ್ತಾ ಮೆಟ್ಟಿಲುಗಳನ್ನು ಹತ್ತತೊಡಗಿದಳು. ಅರ್ಧಕ್ಕೆ ಹಿಂದಿರುಗಿ ಅವನನ್ನೇ ನೋಡುತ್ತಾ, "ಆಲ್ಬರ್ಟ್, ಮಗು ಈಗಷ್ಟೇ ಕುಡಿದಿದ್ದ ಹಾಲಿಗೆ ಆ ದರಿದ್ರ ಮೇಣವನ್ನು ಸೇರಿಸಿರಲಿಲ್ಲ ತಾನೆ?" ಎಂದು ಕೇಳಿದಳು.

"ಅದಕ್ಕೂ ಸೇರಿಸಿದ್ದೆ ಕಣೆ ಮೇಬಲ್! ಈ ಬಾರಿ ಸ್ವಲ್ಪ ಹೆಚ್ಚಿನ ಡೋಜೇ ಸೇರಿಸಿದ್ದೆ. ಏನೀಗ?" ಆಲ್ಬರ್ಟ್ ಪ್ರತಿಭಟಿಸಿದ.

"ನೀನು ಖಂಡಿತ ಮನುಷ್ಯನಲ್ಲ ಆಲ್ಬರ್ಟ್!!" ಮಗುವನ್ನು ಬಿಗಿಯಾಗಿ ಅಪ್ಪಿಕೊಳ್ಳುತ್ತಾ ನಿಡುಸುಯ್ದಳು ಮೇಬಲ್. ಅವಳು ಸಿಟ್ಟಿನಿಂದ ಕಂಪಿಸುತ್ತಿದ್ದಳು.

ಅವಳು ತನ್ನ ಕೆನ್ನೆಗೇ ಹೊಡೆದಳೇನೋ ಎಂಬಂತೆ ಆಲ್ಬರ್ಟನ ಮುಖ ವಿವರ್ಣವಾಯಿತು. ಅವನು ಅವಳಿಗೆ ಬೆರಳನ್ನು ತೋರಿಸುತ್ತಾ, "ನನ್ನ ಮಾತು ನೆನಪಿಡು ಮೇಬಲ್. ನಮ್ಮ ರಾಜ್ಯದಲ್ಲಿ ಎಲ್ಲಿ ಬೇಕಾದರೂ ಆರೋಗ್ಯವಂತ ಮಗುವಿನ ಸ್ಪರ್ಧೆ ನಡೆಯಲಿ. ನಮ್ಮ ಪುಟ್ಟಿ ಮೊದಲನೆಯವಳಾಗಿ ಗೆಲ್ಲದಿದ್ದರೆ ಕೇಳು! ಬೇಕಾದರೆ ಈಗಲೇ ಮಗುವಿನ ತೂಕ ನೋಡು. ತಕ್ಕಡಿ ತರಲೇ?"

"ಆಯ್ತು ತನ್ನಿ!" ಮಗುವನನ್ನು ಕೆಳಗೆ ಎತ್ತಿಕೊಂಡು ಬಂದಳು ಮೇಬಲ್. ನಡುಕೋಣೆಯಲ್ಲಿದ್ದ ಮೇಜಿನ ಮೇಲೆ ಮಗುವನ್ನು ಮಲಗಿಸಿ ಅದರ ಒಂದೊಂದೇ ಬಟ್ಟೆಗಳನ್ನು ಕಳಚತೊಡಗಿದಳು. ಮಗು ಈಗ ನಗ್ನವಾಗಿತ್ತು.

ಮಗು ಎರಡೇ ದಿನಗಳಲ್ಲಿ ಒಂದು ಆರೋಗ್ಯವಂತ ನಾಯಿ ಮರಿಯಂತೆ ಮೈ ಕೈ ತುಂಬಿಕೊಂಡಿದ್ದು ನೋಡಿ ಅವರಿಗೆ ಆಶ್ಚರ್ಯವಾಯಿತು. ಎದೆ ಗೂಡು ಕಾಣುತ್ತಿದ್ದಲ್ಲಿ ಈಗ ಕೊಬ್ಬು ತುಂಬಿಕೊಂಡು ಪುಟ್ಟಿ ಈಗ ಪುಟ್ಟ ಸಿಪಾಯಿಯಂತೆ ಕಾಣಿಸುತ್ತಿದ್ದಳು. ಹೊಟ್ಟೆ ದಪ್ಪಗಾಗಿತ್ತು. ಆದರೆ ಕೈಕಾಲುಗಳು ಮಾತ್ರ ಕೊಬ್ಬಿನ ಉಂಡೆಗಳಿಗೆ ಸಿಕ್ಕಿಸಿದ ಕಡ್ಡಿಗಳಂತೆ ವಿಚಿತ್ರವಾಗಿ ಕಾಣಿಸುತ್ತಿದ್ದವು.

"ಪುಟ್ಟಿಯ ಹೊಟ್ಟೆ ನೋಡು ಮೇಬಲ್! ತೆಳ್ಳನೆ ರೋಮಗಳೂ ಕಾಣಿಸುತ್ತಿವೆ!" ಅವನ್ನು ನೇವರಿಸಲು ಎಂಬಂತೆ ಅವನು ಕೈಯನ್ನು ಮುಂದಕ್ಕೆ ಚಾಚಿದ. ಮೇಬಲ್ ಕೂಡ ಮುಂದೆ ಬಗ್ಗಿ ನೋಡಿದಳು. ಹಳದಿ ವರ್ಣದ ತೆಳು ರೇಷ್ಮೆಯಂತ ರೋಮಗಳು ಎದ್ದು ಕಾಣುತ್ತಿದ್ದವು.

"ಆಲ್ಬರ್ಟ್!... ನಿನ್ನ ಕೈ ಹಿಂತೆಗೆ!!" ಹೆಡೆ ಎತ್ತಿದ ನಾಗರ ಹಾವಿನಂತೆ ಮೇಬಲ್ ಪೂತ್ಕರಿಸಿದಳು. ಆಲ್ಬರ್ಟ್ ಒಮ್ಮೆಲೆ ಕೈ ಹಿಂತೆಗೆದ.

"ಮೇಬಲ್, ರಾಜಪಾಕ ಮನುಷ್ಯರಿಗೆ ಆರೋಗ್ಯಕರವಲ್ಲ ಎಂದು ನೀನು ತಿಳಿದುಕೊಂಡಿದ್ದೆ ಅಲ್ಲ? ಕಳೆದ ವರ್ಷ ನಮ್ಮ ಜೇನು ಇಳುವರಿ ಅರ್ಧಕ್ಕರ್ಧ ಏಕೆ ಕಡಿಮೆಯಾಗಿತ್ತು ಎಂದು ಈಗ ಹೇಳುತ್ತೇನೆ ಕೇಳು: ನಮ್ಮಲ್ಲಿನ ಜೇನು ಪೆಟ್ಟಿಗೆಗಳಲ್ಲಿ ನೂರು ಪೆಟ್ಟಿಗೆಗಳನ್ನು ನಾನು ರಾಜಪಾಕಕ್ಕೆಂದೇ ಮುಡಿಪಾಗಿಟ್ಟಿದ್ದೆ!"

"ಏನಂದ್ರಿ?" ಮೇಬಲ್ ದಿಗ್ಭ್ರಮೆಗೊಂಡಳು.

"ನಿನಗೆ ಗೊತ್ತಿಲ್ಲದಂತೆ ನಾನು ಇದನ್ನು ಮಾಡುತ್ತಲೇ ಬರುತ್ತಿದ್ದೆ ಮೇಬಲ್. ಈ ವರೆಗೆ ಇದನ್ನು ನಿನಗೆ ಹೇಳಲು ನಾನು ಹಿಂತೆಗೆಯುತ್ತಿದ್ದೆ... ನಿನ್ನ ಎದುರು ಅಪಹಾಸ್ಯಕ್ಕೀಡಗಾಬಾರದೆಂದು ಅಷ್ಟೇ..."